

بسم اللهِ الرّحمٰنِ الرّحيم

# ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್ ಅಮ್‌ರಿ ಮಿನ್‌ಕುಮ್ – “ಪರಿಪೂರ್ಣವಾದ ಅನುಸರಣೆಯಿಂದ ಮಾತ್ರವೇ ವಿಜಯ ಲಬ್ದಿ ಸಾಧ್ಯ”

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **05-12-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು*:

يَا أَيُّهَا الَّذِينَ آمَنُوا أَطِيعُوا اللَّهَ وَأَطِيعُوا الرَّسُولَ وَأُولِي الْأَمْرِ مِنْكُمْ فَإِنْ تَنَازَعْتُمْ فِي شَيْءٍ فَرُدُّوهُ إِلَى اللَّهِ وَالرَّسُولِ إِنْ كُنْتُمْ تُؤْمِنُونَ بِاللَّهِ وَالْيَوْمِ الْآخِرِ ذَٰلِكَ خَيْرٌ وَأَحْسَنُ تَأْوِيلًا

*ಯಾ ಅಯ್ಯುಹಲ್ಲಝೀನ ಆಮನೂ ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್ ಅಮ್‌ರಿ ಮಿನ್‌ಕುಮ್ ಫ ಇನ್ ತನಾಝಅ್‌ತುಮ್ ಫೀ ಶೈಯಿನ್ ಫರುದ್ದೂಹು ಇಲಲ್ಲಾಹಿ ವರ್‍ರಸೂಲಿ ಇನ್‌ಕುನ್‌ತುಮ್ ತುಮಿನೂನ ಬಿಲ್ಲಾಹಿ ವಲ್ ಯೌಮಿಲ್ ಆಖಿರಿ. ಝಾಲಿಕ ಖೈರುನ್ ವ ಅಹ್‌ಸನು ತಅ್‌ವೀಲ.*

**“ಎಲೈ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. (ಅವನ) ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಯಾವುದಾದರೂ ವಿಚಾರದಲ್ಲಿ ನಿಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೆ, ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವುಳ್ಳವರಾದರೆ, (ಇತ್ಯರ್ಥಕ್ಕಾಗಿ) ಅದನ್ನು ಅಲ್ಲಾಹನಿಗೂ (ಅವನ) ಸಂದೇಶವಾಹಕನಿಗೂ ಒಪ್ಪಿಸಿರಿ. ಅದು ಅತ್ಯುತ್ತಮ ಮಾರ್ಗವಾಗಿದೆ. ಅದರ ಅಂತ್ಯಫಲ ಅತಿ ಹೆಚ್ಚು ಗುಣಕರವಾದುದು.”** (ಪವಿತ್ರ ಖುರ್‌ಆನ್ 4: 60)

ಪವಿತ್ರ ಖುರ್‌ಆನಿನ ಮೇಲೆ ಉಲ್ಲೇಖಿಸಿದ ವಚನದಲ್ಲಿ ಒಬ್ಬ ಸತ್ಯವಿಶ್ವಾಸಿಯ ಬಗ್ಗೆ ಸೈದ್ಧಾಂತಿಕವಾಗಿ ಹೀಗೆ ಹೇಳಲಾಗಿದೆ: ಅವನು ತನ್ನ ಅನುಸರಣೆಯ ಗುಣವನ್ನು ಸ್ಪಷ್ಟವಾಗಿ ಪ್ರಕಟಿಸಬೇಕು. ಅಲ್ಲಾಹನ ಅನುಸರಣೆ ಅಲ್ಲಾಹನ ಸಂದೇಶವಾಹಕರ ಅನುಸರಣೆ ಮತ್ತು ಅಧಿಕಾರಿಗಳ ಅನುಸರಣೆ ಸ್ಪಷ್ಟವಾಗಿ ಮಾಡಬೇಕು. ಆದರೆ ಆಡಳಿತಾಧಿಕಾರಿ, ಅಲ್ಲಾಹನ ಮತ್ತು ಅಲ್ಲಾಹನ ಸಂದೇಶವಾಹಕರ ಸ್ಪಷ್ಟ ಆಜ್ಞೆಗಳಿಗೆ ವಿರುದ್ಧವಾಗಿ ಯಾವುದಾದರೂ ಆಜ್ಞೆ ನೀಡಿದರೆ ಆಗ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳಿಗೆ ಆದ್ಯತೆ ನೀಡಬೇಕು. ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪಮಾಡುವುದಿಲ್ಲವಾದರೆ ಸರಕಾರಿ ಅಧಿಕಾರಿಗಳು ಮುಸ್ಲಿಮರಾಗಿದ್ದರೂ ಅಮುಸ್ಲಿಮರಾಗಿದ್ದರೂ ಅವರ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವಾಗಿದೆ.

ಈ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳುತ್ತಾರೆ:

“ಪವಿತ್ರ ಖುರ್‌ಆನ್‌ನಲ್ಲಿ أَطِيعُوا اللَّهَ وَأَطِيعُوا الرَّسُولَ وَأُولِي الْأَمْرِ مِنْكُمْ **ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್ ಅಮ್‌ರಿ ಮಿನ್‌ಕುಮ್** ಎಂದು ಹೇಳಿದುದರಿಂದ **ಊಲಿಲ್ ಅಮ್‌ರ್** (ಅಧಿಕಾರಿಗಳು) ಅವರ ಅನುಸರಣೆ ಮಾಡಬೇಕೆಂದು ಸ್ಪಷ್ಟ ಆಜ್ಞೆ ಇದೆ. ಸರಕಾರ, **ಮಿನ್‌ಕುಮ್** (ನಿಮ್ಮ ಪೈಕಿ) ಎಂದು ಹೇಳಿದವರಲ್ಲಿ ಸೇರಿಲ್ಲ ಎಂದು ಯಾರಾದರೂ ಹೇಳುವುದಾದರೆ ಅದು ಅವನು ಮಾಡುವ ಸ್ಪಷ್ಟ ತಪ್ಪಾಗಿದೆ. ಶರೀಅತ್ ನಿಯಮಗಳಿಗೆ ಅನುಸಾರವಾಗಿ ಆಜ್ಞೆ ನೀಡುವ ಸರಕಾರ **ಮಿನ್‌ಕುಮ್** ಎಂಬುದರಲ್ಲಿ ಸೇರುತ್ತದೆ. ನಮ್ಮನ್ನು ವಿರೋಧಿಸದವರು ನಮ್ಮವರಲ್ಲಿ ಸೇರುತ್ತಾರೆ. ಹಾಗೂ ಸರಕಾರವನ್ನು ಅನುಸರಿಸಬೇಕೆಂದು ಈ ಪವಿತ್ರ ಖುರ್‌ಆನ್ ವಚನದಲ್ಲಿ ಬಹಳ ಸ್ಪಷ್ಟವಾಗಿ ಸೂಚಿಸಲಾಗಿದೆ.”

ಈ ಕಾಲಘಟ್ಟದ **ಹಕಮ್** ಮತ್ತು **ಅದ್ಲ್** ಆಗಿರುವ (ನ್ಯಾಯನಿಷ್ಠನಾದ ಅಧಿಕಾರಿಯಾಗಿರುವ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಪಷ್ಟವಾಗಿ ಹೇಳಿದ್ದಾರೆ: ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ನಿರಾಕರಿಸುವ ಆಜ್ಞೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸರಕಾರಿ ನಿಯಮಗಳನ್ನು ಅನುಸರಿಸುವುದು ಮತ್ತು ತಾನು ವಾಸಿಸುವ ದೇಶದ ನಿಯಮಗಳನ್ನು ಪೂರ್ಣವಾಗಿ ಅನುಸರಿಸುವುದು ಸತ್ಯವಿಶ್ವಾಸಿಗೆ ಕಡ್ಡಾಯವಾಗಿದೆ. ಈ ಸುವರ್ಣ ತತ್ವವನ್ನು ಈಗಿನ ಕಾಲದ ಮುಸ್ಲಿಮರು ಪಾಲಿಸುವುದಾದರೆ ಮತ್ತು ತಮ್ಮ ಸರಕಾರದ ವಿರುದ್ಧ ಹೋರಾಡಬಾರದೆಂದು ಮನವರಿಕೆ ಮಾಡುವುದಾದರೆ ಅನೇಕ ದೇಶಗಳಲ್ಲಿ ವ್ಯಾಪಿಸಿರುವ ಗಲಬೆ ಗೊಂದಲಗಳು ಬಹಳ ಮಟ್ಟಿಗೆ ಕೊನೆಗೊಂಡು ಶಾಂತಿ ಸ್ಥಾಪಿತವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇನ್ನೊಂದು ಉಲ್ಲೇಖ ನಿಮ್ಮ ಮುಂದೆ ಇರಿಸುವೆನು. ಅದರಲ್ಲಿ ಅನುಸರಣೆಯ ಮಟ್ಟ, ಅನುಸರಣೆಯ ಮಹತ್ವ, ಅನುಸರಣೆ ಮಾಡದಿದ್ದರೆ ಉಂಟಾಗುವ ಹಾನಿಗಳು, ಇಸ್ಲಾಮ್ ಹಬ್ಬುವುದರಲ್ಲಿ ಅನುಸರಣೆ ವಹಿಸಿದ ಪಾತ್ರ ಮೊದಲಾದವುಗಳನ್ನು ವಿವರಿಸಲಾಗಿದೆ. ಪ್ರಥಮವಾಗಿ ನಾನು ಮೊದಲು ಹೇಳಿದ ಹಾಗೆ ಅಲ್ಲಾಹನನ್ನು ಅನುಸರಿಸಬೇಕು. ಅಲ್ಲಾಹನ ಸಂದೇಶವಾಹಕನನ್ನು ಅನುಸರಿಸಬೇಕು ಮತ್ತು ಅನಂತರ ತಮ್ಮ ನಾಯಕ, ಸರಕಾರ ಮೊದಲಾದವುಗಳನ್ನು ಅನುಸರಿಸಬೇಕು. ಇದರಲ್ಲಿ ಸರಕಾರಿ ವ್ಯವಸ್ಥೆ ಮಾತ್ರವಲ್ಲ ಜಮಾಅತಿನ ವ್ಯವಸ್ಥೆ ಸಹ ಸೇರುತ್ತದೆ. ಖಿಲಾಫತನ್ನು ಅನುಸರಿಸುವುದು ಜಮಾಅತಿನ ವ್ಯವಸ್ಥೆಯನ್ನು ಮತ್ತು ಸರಕಾರವನ್ನು ಅನುಸರಿಸುವುದಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ ಖಿಲಾಫತ್ ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನು ಸ್ಥಾಪಿಸುತ್ತದೆ. ಜಮಾಅತಿನ ವ್ಯವಸ್ಥೆ ಖಿಲಾಫತ್‌ಗೆ ಅಧೀನವಾಗಿದೆ. ಖಿಲಾಫತ್‌ನ ಸೌಂದರ್ಯ ಹೇಗಿದೆ ಎಂದರೆ ಜಮಾಅತಿನ ವ್ಯವಸ್ಥೆ ಚಲಾಯಿಸಲು

ನೇಮಿಸಲ್ಪಟ್ಟ ಹುದ್ದೇದಾರರ ಮತ್ತು ಜಮಾಅತಿನ ಸದಸ್ಯರ ಮಧ್ಯೆ ಯಾವುದಾದರೂ ಸಮಸ್ಯೆ ತಲೆದೋರಿದರೆ, ಯಾವುದಾದರೂ ಬಿಕ್ಕಟ್ಟು ಉಂಟಾದರೆ ಆಯಾಕಾಲದ ಖಲೀಫರು ಅದನ್ನು ಪರಿಹರಿಸುತ್ತಾರೆ. ಇದು ಖಲೀಫರ ಕರ್ತವ್ಯಗಳಲ್ಲಿ ಸೇರಿದೆ. ಖಿಲಾಫತನ್ನು ಅನುಸರಿಸುವುದು ಸರಕಾರವನ್ನು ಅನುಸರಿಸುವುದಕ್ಕಿಂತಲೂ ಮಹತ್ವದ್ದು ಎಂದು ನಾನು ಹೇಳಿದುದರಿಂದ ತಪ್ಪು ಗ್ರಹಿಕೆ ಉಂಟಾಗಬಾರದು. ಆಯಾ ಕಾಲದ ಖಲೀಫರು ದೇಶದ ನಿಯಮಗಳನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಪಾಲಿಸುವವರಾಗಿದ್ದಾರೆ. ಪಾಲನೆ ಮಾಡುತ್ತಿದ್ದಾರೆ ಮತ್ತು ಮಾಡಿಸುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದ್ದಾರೆ:

**ಊಲಿಲ್ ಅಮ್ರ್** ಎಂದು ಪವಿತ್ರ ಖುರ್‌ಆನ್ ಹೇಳಿದುದರ ಅರ್ಥ ಲೌಕಿಕವಾಗಿ ಅರಸ ಮತ್ತು ಆಧ್ಯಾತ್ಮಿಕವಾಗಿ ಅದರ ಅರ್ಥ ಇಮಾಮುಝ್ಝಮಾನ್ (ಕಾಲಘಟ್ಟದ ಇಮಾಮ್) ಆಗಿದ್ದಾರೆ.

ಸರಕಾರದ ಲೌಕಿಕ ವ್ಯವಸ್ಥೆಯೊಳಗೆ ಒಂದು ಆಧ್ಯಾತ್ಮಿಕ ವ್ಯವಸ್ಥೆ ಸಹ ಚಲಾಯಿಸಬಹುದಾಗಿದೆ. ಅಂತಹ ವ್ಯವಸ್ಥೆ ಚಲಾವಣೆಯಲ್ಲಿದೆ. ಈ ಆಧ್ಯಾತ್ಮಿಕ ವ್ಯವಸ್ಥೆಯ ಭಾಗವಾಗಿ ನಾವಿದ್ದೇವೆ. ಈ ಕಾಲಘಟ್ಟದ ಇಮಾಮರ ಆಧ್ಯಾತ್ಮಿಕ ವ್ಯವಸ್ಥೆ ಜಾರಿಗೊಳಿಸಲು ಅಲ್ಲಾಹನು ಖಿಲಾಫತ್ ವ್ಯವಸ್ಥೆಯನ್ನು ಜಾರಿಗೊಳಿಸಿದನು. ಖಿಲಾಫತ್ ಅಲ್ಲಾಹನ ಮತ್ತು ಅವನ ಪ್ರವಾದಿಯ ರಾಜ್ಯಭಾರವನ್ನು ಮನುಷ್ಯರ ಹೃದಯಗಳಲ್ಲಿ ಸ್ಥಾಪಿಸಲು ಪ್ರಯತ್ನ ಮಾಡುತ್ತಿದೆ. ಕಲಹ ಜಗಳಗಳ ಸಂದರ್ಭದಲ್ಲಿ ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳಿಗನುಸಾರವಾಗಿ ತೀರ್ಪು ನೀಡುತ್ತದೆ. ಖಿಲಾಫತ್ ವ್ಯವಸ್ಥೆ ನಮ್ಮಲ್ಲಿ ಜಾರಿಗೊಂಡಿರುವುದು ಅಲ್ಲಾಹನು ನಮಗೆ ನೀಡಿದ ಅನುಗ್ರಹವಾಗಿದೆ. ಕಲಹಗಳ ಸಂದರ್ಭದಲ್ಲಿ ತೀರ್ಪು ನೀಡಲು ಅಲ್ಲಾಹನ ಕಡೆಗೆ ಮತ್ತು ಅವನ ಸಂದೇಶವಾಹಕರ ಕಡೆಗೆ ಮರಳಬೇಕು ಎಂಬ ಪವಿತ್ರ ಖುರ್‌ಆನಿನ ಆಜ್ಞೆಯ ಬಗ್ಗೆ ವಿವಿಧ ಮುಸ್ಲಿಮ್ ಪಂಗಡಗಳ ಮತಪಂಡಿತರ ತಮ್ಮ ತಮ್ಮದೇ ಆಗಿರುವ ವ್ಯಾಖ್ಯಾನಗಳಿವೆ. ಅವರ ವ್ಯಾಖ್ಯಾನಗಳು ಸಮಸ್ಯೆಗಳನ್ನು ಇನ್ನಷ್ಟು ಗೊಂದಲಮಯವನ್ನಾಗಿ ಮಾಡುತ್ತವೆ. ಇದೇ ರೀತಿ ಸರಕಾರವನ್ನು ಅನುಸರಿಸುವ ವಿಷಯದಲ್ಲಿ ಸಹ ವಿವಿಧ ಅಭಿಪ್ರಾಯಗಳು ವಿವಿಧ ಸಮಸ್ಯೆಗಳನ್ನು ಉಂಟು ಮಾಡುತ್ತವೆ. ಆದರೆ ಒಂದು ಸ್ಪಷ್ಟ ತೀರ್ಮಾನ ಖಿಲಾಫತ್‌ನ ಅಧೀನವಾಗಿ ಮಾತ್ರ ಸಾಧ್ಯವಿದೆ. ಈ ವಿಷಯದ ಬಗ್ಗೆ ಅಹ್ಮದಿಯರು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಅದು ಕಡಿಮೆಯೇ ಆಗಿರುತ್ತದೆ. ಖಿಲಾಫತನ್ನು ಪೂರ್ಣವಾಗಿ ಅನುಸರಿಸುವ ಮೂಲಕವೇ ಈ ಕೃತಜ್ಞತೆಯನ್ನು ಸರಿಯಾಗಿ ಅರ್ಪಿಸಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಇದೊಂದು ಮಹತ್ವಪೂರ್ಣವಾದ ವಿಷಯವಾಗಿದೆ– ಸತ್ಯ ಹೃದಯದೊಂದಿಗೆ ಅನುಸರಣೆ ಮಾಡಿದರೆ ಹೃದಯದಲ್ಲಿ ಒಂದು ರೀತಿಯ ಪ್ರಕಾಶ ಮತ್ತು ಆತ್ಮದಲ್ಲಿ ಒಂದು ಅಭಿರುಚಿ ಮತ್ತು ಬೆಳಕು ಉಂಟಾಗುತ್ತದೆ. ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಅನುಸರಿಸಿದ ನಂತರವೂ ಪ್ರಕಾಶ ಲಭಿಸುವುದಿಲ್ಲವಾದರೆ ಅದರಿಂದ ಪ್ರಯೋಜನವಿಲ್ಲ. ಸರಕಾರವನ್ನು ಅನುಸರಿಸುವುದರಿಂದ ಶಾಂತಿ ಮತ್ತು ನೆಮ್ಮದಿ ತಲೆದೋರಲಾರದು. ಆದರೆ ಆಧ್ಯಾತ್ಮಿಕ ಪ್ರಕಾಶ ಮತ್ತು ಅಭಿರುಚಿ ತಲೆದೋರುವುದು ಆಧ್ಯಾತ್ಮಿಕ ವ್ಯವಸ್ಥೆಯನ್ನು ಅನುಸರಿಸುವ ಮೂಲಕವೇ ಆಗಿದೆ."

ಆಧ್ಯಾತ್ಮಿಕ ಮಟ್ಟವನ್ನು ಉನ್ನತಗೊಳಿಸುವ ಬಗ್ಗೆ ಒಂದು ಮುಖ್ಯ ಅಂಶವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: "ಅನುಸರಣೆಯ ಎಷ್ಟು ಆವಶ್ಯಕತೆ ಇದೆಯೋ ಅಷ್ಟು ಆರಾಧನೆಗಳದ್ದು ಇರುವುದಿಲ್ಲ."

ಅನುಸರಣೆಯ ಮಟ್ಟವನ್ನು ಉನ್ನತಗೊಳಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಮುಖ್ಯ ವಿಷಯವನ್ನು ಹೀಗೆ ವಿವರಿಸಿದರು: ಅನುಸರಣೆ ಮಾಡುವಾಗ ತನ್ನ ಸ್ವಂತ ಅಭಿಪ್ರಾಯವನ್ನು ಹತ್ಯೆ ಮಾಡುವುದು ಆವಶ್ಯಕವಾಗಿದೆ. ಅಹಂಕಾರವನ್ನು ಬಿಡಬೇಕು. ಆಶಾಭಿಲಾಷೆಗಳನ್ನು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಇಷ್ಟಕ್ಕೆ ಅನುಸಾರವಾಗಿ ಪರಿವರ್ತಿಸಬೇಕು. ಆಗ ಮಾತ್ರ ಅನುಸರಣೆಯ ಉನ್ನತಮಟ್ಟ ಲಭಿಸುವುದು. ಹೀಗೆ ಮಾಡದೆ ಅನುಸರಣೆ ಸಾಧ್ಯವೇ ಇಲ್ಲ.

ದೊಡ್ಡ ದೊಡ್ಡ ಏಕದೇವ ವಿಶ್ವಾಸಿಗಳ ಹೃದಯಗಳಲ್ಲೂ ವಿಗ್ರಹಗಳಿರಬಹುದು. ಅವರು ಏಕದೇವನನ್ನು ಆರಾಧಿಸುವುದಾಗಿ ವಾದಿಸುತ್ತಾರಾದರೂ ಸ್ವಂತ ಇಷ್ಟದ ಮತ್ತು ದುರಹಂಕಾರದ ವಿಗ್ರಹಗಳು ಅವರ ಹೃದಯಗಳಲ್ಲಿ ಇರುತ್ತವೆ. ಮುಂದೊಂದು ದಿನ ಅವು ಮನುಷ್ಯನನ್ನು ಸಾಮಾನ್ಯ ಅನುಸರಣೆಯಿಂದ ಸಹ ಹೊರಗೆ ಹಾಕುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರು ಸತ್ಯವಾದ ಅನುಸರಣೆ ಮಾಡಿದ ನಂತರವೇ ಆರಾಧನೆಗಳ ಉನ್ನತ ಪರಿಣಾಮಗಳನ್ನು ಗಳಿಸಿದರು. ಅವರು ನಮಗೆ ಉದಾಹರಣೆಗಳಾಗಿದ್ದಾರೆ."

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ನಿಮಗೆ ಒಬ್ಬ ನೀಗ್ರೋ ಗುಲಾಮನನ್ನು ಅಮೀರನನ್ನಾಗಿ ನೇಮಿಸಿದ್ದರೆ ಸಹ ಅವರನ್ನು ಅನುಸರಿಸಬೇಕು" ಇನ್ನೊಮ್ಮೆ ಹೀಗೆ ಹೇಳಿದರು: "ನಿಮ್ಮ ಅಮೀರ್ 'ಮುನಖ್ಖ'ದಷ್ಟು ಚಿಕ್ಕ ಗಾತ್ರದ ತಲೆಯನ್ನು ಹೊಂದಿದ್ದರೂ ಅವರನ್ನು ಅನುಸರಿಸಬೇಕು." ಇದರ ಅರ್ಥ ಬುದ್ಧಿಯಲ್ಲಿ ಸ್ವಲ್ಪ ನ್ಯೂನ್ಯತೆ ಇದ್ದರೂ ಸಹ ಅಮೀರನನ್ನು ಅನುಸರಿಸಬೇಕು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಾಮುದಾಯಿಕ ಅಭಿವೃದ್ಧಿಯನ್ನು ಅನುಸರಣೆಯೊಂದಿಗೆ ಜೋಡಿಸಿ ಹೀಗೆ ಹೇಳಿದರು:

ಒಂದು ಸಮುದಾಯದಲ್ಲಿ ಅನುಸರಣೆಯ ತತ್ವವು ಪರಿಗಣಿಸಲ್ಪಡದಿದ್ದಲ್ಲಿ ಅದರೊಳಗೆ ಐಕ್ಯದ ಆತ್ಮವು

ಊದಲ್ಪಡಲಾರದು. ಈ ತತ್ವವನ್ನು ಅನುಸರಿಸುವುದರಲ್ಲಿಯೇ ಅಭಿವೃದ್ಧಿಯ ರಹಸ್ಯ ಅಡಕವಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು: ಜಮಾಅತ್‌ನೊಂದಿಗೆ ಸಂಬಂಧಿಸಿ, ಇಮಾಮರ ಮಾತುಗಳನ್ನು ಆಲಿಸಿ ಅನುಸರಿಸುವುದರಿಂದಲೇ ಅಭಿವೃದ್ಧಿ ಲಭಿಸುತ್ತದೆ. ಇದಕ್ಕೆ ಹೊರತು ಅಭಿವೃದ್ಧಿ ಲಭಿಸಲಾರದು.

ಇಂದಿನ ಕಾಲದ ಮುಸ್ಲಿಮರು ಈ ತತ್ವವನ್ನು ಮನವರಿಕೆ ಮಾಡುವುದಾದರೆ ಅವರು ಒಂದು ಬೃಹತ್ ಶಕ್ತಿ ಆಗಬಹುದಾಗಿತ್ತು. ಅವರನ್ನು ಲೋಕದ ಯಾವ ಶಕ್ತಿಗೂ ಎದುರಿಸಲು ಸಾಧ್ಯವಾಗುತ್ತಿರಲಿಲ್ಲ.

ಅಹ್ಮದಿಯರೆಂದು ಹೇಳಿಕೊಳ್ಳುವ ನಾವು ಪರಿಪೂರ್ಣ ಅನುಸರಣೆಯ ಮಟ್ಟವನ್ನು ಗಳಿಸಲು ಪ್ರಯತ್ನ ಮಾಡಬೇಕಾಗಿದೆ. ಆಧ್ಯಾತ್ಮಿಕ ಜಮಾಅತ್‌ಗಳಿಗೆ ಅದರ ಅಂತಿಮ ಫಲ ಉತ್ತಮವಾಗಿರಬೇಕಾದರೆ ಅನುಸರಣೆ ಅನಿವಾರ್ಯವೆಂದು ಅಲ್ಲಾಹನು ಹೇಳಿರುವನು. ಅನುಸರಣೆ ಮಾಡಿದರೆ ಅಂತಿಮಗತಿ ಉತ್ತಮವಾಗುವುದು. ಅದರಿಂದ ಕ್ರಾಂತಿ ತಲೆದೋರುವುದು. ನಾವು ಲೌಕಿಕ ವ್ಯವಸ್ಥೆಯಲ್ಲೂ ಅನುಸರಣೆಯ ಮನೋಭಾವದ ಫಲದಿಂದ ಎಷ್ಟೆಷ್ಟು ಅಧ್ಭುತ ಕೆಲಸಗಳು ಈಡೇರುವುದಾಗಿ ಕಾಣುತ್ತೇವೆ.

ನೆಪೋಲಿಯನ್ ಬಗ್ಗೆ ನಾವು ಚರಿತ್ರೆಯಲ್ಲಿ ಅಧ್ಯಯನ ಮಾಡುತ್ತೇವೆ. ಅವನ ಕಾಲದಲ್ಲಿ ಫ್ರಾನ್ಸ್ ದೇಶ ಉನ್ನತಿಯಿಂದ ಅವನತಿ ಕಡೆಗೆ ಸಾಗುತ್ತಿತ್ತು. ಅದರ ಸ್ಥಿತಿ ಕೆಟ್ಟು ಹೋಗುತ್ತಾ ಇತ್ತು. ನೆಪೋಲಿಯನ್ ಜನರೊಂದಿಗೆ ಹೇಳಿದನು: "ನಿಮ್ಮಲ್ಲಿ ಭಿನ್ನಾಭಿಪ್ರಾಯಗಳು ಮತ್ತು ಒಡಕು ಇರುವಾಗ ನೀವು ಜಯಶಾಲಿಗಳಾಗಲಾರಿರಿ. ನೀವು ಅನುಸರಣೆ ತೋರಿಸುವವರಾದರೆ ನೀವು ಜಯಶಾಲಿಗಳಾಗುವಿರಿ. ನೀವು ಅಭಿವೃಧ್ಧಿಗಳಿಸುವಿರಿ. ನೀವು ಉನ್ನತ ಸ್ಥಾನ ಪಡೆಯುವಿರಿ" ಎಂದು. ಫ್ರಾನ್ಸ್ ದೇಶದ ಅಭಿವೃದ್ಧಿಯನ್ನು ಹಾರೈಸುತ್ತಿದ್ದವರು ಅವನ ಮಾತನ್ನು ಆಲಿಸಿ ಅವನ ಜೊತೆಗೂಡಿದರು. ಅವನನ್ನು ತಮ್ಮ ನಾಯಕನನ್ನಾಗಿ ಮಾಡಿ ಅನುಸರಣೆಯ ಉತ್ತಮ ಉದಾಹರಣೆ ಪ್ರಕಟಿಸಿದರು. ಅವನು ಜನರಲ್ಲಿ ಎಂತಹ ಮನೋಭಾವನೆ ಉಂಟುಮಾಡಿದನೆಂದರೆ ಜನರು ಅವನ ಪ್ರತಿಯೊಂದು ಮಾತನ್ನು ಅಂಗೀಕರಿಸುತ್ತಿದ್ದರು. ಅವರ ಅನುಸರಣೆಯ ಪ್ರಭಾವ ಎಷ್ಟಿತ್ತೆಂದರೆ, ಅದರಿಂದ ನೆಪೋಲಿಯನ್‌ನ ಜೀವಿತವು ಸಹ ಪರಿವರ್ತನೆಗೊಂಡಿತು.

ನಂತರ ಏನಾಯಿತೆಂದರೆ, ಒಮ್ಮೆ ಒಂದು ದೊಡ್ಡ ಯುದ್ಧದಲ್ಲಿ ನೆಪೋಲಿಯನ್ ಸೋತನು. ಅವನನ್ನು ಇಟಲಿಯ ಒಂದು ದ್ವೀಪದಲ್ಲಿ ಬಂಧಿಸಲಾಯಿತು. ಫ್ರಾನ್ಸ್‌ನಲ್ಲಿ ಹೊಸ ಸರಕಾರ ಅಧಿಕಾರಕ್ಕೆ ಬಂತು. ಫ್ರಾನ್ಸ್ ದೇಶದ ಹೊಸ ದೊರೆ ಪಾದರಿಗಳನ್ನು ಕರೆಸಿ ಅವರ ಮೂಲಕ ಸೈನಿಕರಿಂದ ಮತ್ತು ಜರ್ನಲ್‌ಗಳಿಂದ ಬೈಬಲ್ ಮೇಲೆ ಕೈ ಇಟ್ಟು ಪ್ರಮಾಣ ಮಾಡಿಸಿದನು. ನೆಪೋಲಿಯನ್ ಜನರಿಂದ ಅನುಸರಣೆಯ ಎಂತಹ ವಾಗ್ದಾನ ಪಡೆದಿದ್ದಾನೆಂದರೆ ಅವನು ಮರಳಿ ಬಂದರೆ ಜನರು ಪುನಃ ಅವನನ್ನು ಅನುಸರಿಸುವರು ಎಂಬ ಭಯ ದೊರೆಗಿತ್ತು. ನಂತರ ನೆಪೋಲಿಯನ್ ಬಂಧನದಿಂದ ತಪ್ಪಿಸಿಕೊಂಡು ಫ್ರಾನ್ಸ್‌ಗೆ ಮರಳಿ ಬಂದನು. ಅವನು ತನ್ನ ಸುತ್ತುಮುತ್ತ ಕೃಷಿಕರನ್ನೂ ಸಾಮಾನ್ಯ ಜನರನ್ನೂ ಜಮಾಯಿಸಲು ತೊಡಗಿದನು. ಆ ಜನರಿಗೆ ಸೈನಿಕ ತರಬೇತಿ ದೊರೆತಿರಲಿಲ್ಲ ಮತ್ತು ಸಾಕಷ್ಟು ಆಯಧಗಳೂ ಇರಲಿಲ್ಲ. ದೊರೆಗೆ ನೆಪೋಲಿಯನ್ ಮರಳಿ ಬಂದ ಸಮಾಚಾರ ಲಭಿಸಿದಾಗ ಅವನು ಒಬ್ಬ ಜನರಲ್‌ನನ್ನು ಸೈನ್ಯದೊಂದಿಗೆ ಕಳುಹಿಸಿ ನೆಪೋಲಿಯನ್‌ನನ್ನು ಮುಗಿಸಿ ಬಿಡಲು ತಿಳಿಸಿದನು.

ಆದರೆ, "ನಿಮ್ಮ ದೊರೆ ನೆಪೋಲಿಯನ್ ನಿಮ್ಮನ್ನು ಆಮಂತ್ರಿಸುತ್ತಾನೆ" ಎಂಬ ಶಬ್ದ ಕಿವಿಗೆ ಕೇಳಿಸಿದ ಕೂಡಲೆ ಆ ಜನರಲ್ ಮತ್ತು ಅವನೊಂದಿಗಿದ್ದ ಸೈನ್ಯ ನೆಪೋಲಿಯನ್‌ನೊಂದಿಗೆ ಸೇರಿಕೊಂಡಿತು. ಇದು ನೆಪೋಲಿಯನ್ ಫ್ರಾನ್ಸ್ ದೇಶದ ಜನರಿಗೆ ಕಲಿಸಿದ ಅನುಸರಣೆಯ ಪಾಠದ ಫಲವಾಗಿತ್ತು. ಅವರು ಅನಂತರ ಮಾಡಿದ ತಮ್ಮ ಪ್ರತಿಜ್ಞೆಯನ್ನು ಮರೆತು ಬಿಟ್ಟು ನೆಪೋಲಿಯನ್‌ಗೆ ಅನುಸರಣೆ ತೋರಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ನೆಪೋಲಿಯನ್‌ಗೆ ಸಂಬಂಧಿಸಿ ಮೇಲಿನಂತೆ ವಿವರಿಸಿ ಹೀಗೆ ಹೇಳಿದರು: "ನೆಪೋಲಿಯನ್ ಮತ್ತು ಅವನ ಹಾಗೆ ಇರುವ ಬೇರೆ ರಾಷ್ಟ್ರ ನಾಯಕರಿಗೆ ಸತ್ಯ ಧರ್ಮಗಳ ನಾಯಕರಿಗೆ ದೊರಕುವಂತಹ ದೈವಿಕ ಸಹಾಯ ದೊರೆತಿರಲಿಲ್ಲ. ಹೀಗಿದ್ದರೂ ಅವರು ಕ್ರಾಂತಿಯನ್ನುಂಟು ಮಾಡಿದರು. أَطِيعُوا اللَّهَ وَأَطِيعُوا الرَّسُولَ وَأُولِي الأَمْرِ مِنْكُمْ **'ಅತೀಉಲ್ಲಾಹ ವ ಅತೀಉರ್‌ರಸೂಲ ವ ಊಲಿಲ್ ಅಮ್‌ರಿ ಮಿನ್‌ಕುಮ್'** ಎಂಬುದು ಎಂತಹ ಆಜ್ಞೆ ಎಂದರೆ ಯಾವುದಾದರೂ ಜನಾಂಗ ಅದನ್ನು ಅನುಸರಿಸದೆ ಇದ್ದರೆ, ಆ ಜನಾಂಗ ಸತ್ಯ ಧರ್ಮವನ್ನು ಅನುಸರಿಸುವವರಾಗಿದ್ದರೂ ಅಥವಾ ಅದರ ಬಗ್ಗೆ ಅಜ್ಞರಾಗಿದ್ದರೂ ಎಂದೂ ಅವರು ಜಯಶಾಲಿಗಳಾಗಲಾರರು."

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಕೆಳಗಿನ ಉಪದೇಶವನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಿ ಕೊಳ್ಳುವುದು ಆವಶ್ಯಕವಾಗಿದೆ.

"ಒಂದು ಸಮುದಾಯವಾಗಲು ಐಕ್ಯತೆ ಮತ್ತು ಅನುಸರಣೆ ಅತ್ಯಂತ ಆವಶ್ಯಕವಾಗಿದೆ. ಅದಿಲ್ಲದಿದ್ದರೆ ಅವನತಿಯೂ ಅಧಃಪತನವೂ ಸಂಭವಿಸುವುದು."

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ:

وَاعْتَصِمُوا بِحَبْلِ اللَّهِ جَمِيعًا وَلاَ تَفَرَّقُوا وَاذْكُرُوا نِعْمَةَ اللَّهِ عَلَيْكُمْ
إِذْ كُنْتُمْ أَعْدَاءً فَأَلَّفَ بَيْنَ قُلُوبِكُمْ فَأَصْبَحْتُمْ بِنِعْمَتِهِ إِخْوَانًا وَكُنْتُمْ
عَلَى شَفَا حُفْرَةٍ مِنَ النَّارِ فَأَنْقَذَكُمْ مِنْهَا كَذَلِكَ يُبَيِّنُ اللَّهُ لَكُمْ آيَاتِهِ
لَعَلَّكُمْ تَهْتَدُونَ

*ವಅ್‌ತಸಿಮೂ ಬಿ ಹಬ್ಲಿಲ್ಲಾಹಿ ಜಮೀಅನ್ ವಲಾ ತಫರ್‌ರಖೂ ವಝ್‌ಕುರೂ ನಿಅ್‌ಮತಲ್ಲಾಹಿ ಅಲೈಹಿಕುಮ್ ಇಝ್ ಕುನ್‌ತುಮ್ ಅಅ್‌ದಾಅನ್ ಫ ಅಲ್ಲಫ ಬೈನ ಖುಲೂಬಿಕುಮ್ ಫಅಸ್‌ಬಹ್‌ತುಮ್*

*ಬಿನಿಅ್‌ಮತಿಹೀ ಇಖ್‌ವಾನ. ವ ಕುನ್‌ತುಮ್ ಶಫಾ ಹುಫ್‌ರತಿನ್ ಮಿನನ್ನಾರಿ ಫಅ್‌ಖದಕುಮ್ ಮಿನ್‌ಹಾ ಕಝಾಲಿಕ ಯುಬಯ್ಯಿನುಲ್ಲಾಹು ಲಕುಮ್ ಆಯಾತಿಹೀ ಲಅಲ್ಲಕುಮ್ ತಹ್‌ತದೂನ್.*

**"ನೀವೆಲ್ಲರೂ ಒಟ್ಟು ಸೇರಿಕೊಂಡು ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ; ಭಿನ್ನ ಭಿನ್ನರಾಗದಿರಿ. ನೀವು ಪರಸ್ಪರ ಶತ್ರುಗಳಾಗಿದ್ದಾಗ ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಅನ್ಯೋನ್ಯ ಒಂದು ಗೂಡಿಸಿದ ಫಲವಾಗಿ ಅವನ ಅನುಗ್ರಹದಿಂದ ನೀವು ಪರಸ್ಪರ ಸಹೋದರರಾದಿರಿ. ನೀವು ಒಂದು ಅಗ್ನಿಕುಂಡದ ಅಂಚಿನಲ್ಲಿದ್ದಾಗ ಅವನು ನಿಮ್ಮನ್ನು ಅದರಿಂದ ರಕ್ಷಿಸಿದನು. ಹೀಗೆ ಅಲ್ಲಾಹನು ತನ್ನ ಆಜ್ಞೆಗಳನ್ನು ವಿವರಿಸಿ ಕೊಡುತ್ತಾನೆ– ನೀವು ಸತ್ಪಥವನ್ನು ಪಡೆಯಲಿಕ್ಕಾಗಿ."** (ಪವಿತ್ರ ಖುರ್‌ಆನ್ 3: 104)

ಆದರೆ, ಇಂದು ಮುಸ್ಲಿಮರ ದುರ್ಗತಿ ಹೇಗಿದೆ ಎಂದರೆ ಪವಿತ್ರ ಖುರ್‌ಆನ್‌ನಲ್ಲಿ ಇಂತಹ ಸ್ಪಷ್ಟ ಆದೇಶವಿದ್ದರೂ ಅವರ ಒಡಕು ಮತ್ತು ಭಿನ್ನಾಭಿಪ್ರಾಯಗಳು ಅತ್ಯಂತ ಹೆಚ್ಚಾಗಿವೆ. ಅವರು ತಮಗೆ ದೊರೆತ ಅನುಗ್ರಹಗಳನ್ನು ಮರೆತು ಬಿಟ್ಟಿರುವರು ಮತ್ತು ಈ ಕಾರಣದಿಂದ ಅಧಃ ಪತನದ ತಳವನ್ನು ತಲಪಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಿಂದಲೇ ಮುಸ್ಲಿಮರ ಸ್ಥಿತಿ ಹೀಗೆ ಇತ್ತು. ಈಗಂತೂ ಅವರ ಸ್ಥಿತಿ ಅತ್ಯಂತ ಕೆಟ್ಟು ಹೋಗಿದೆ. ಆದರೆ ಅವರು ಅದನ್ನು ಮನವರಿಕೆ ಮಾಡಿಕೊಳ್ಳುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: "ನೀವು ಭಿನ್ನಾಭಿಪ್ರಾಯಗಳನ್ನು ತ್ಯಜಿಸಿರಿ ಮತ್ತು ಈ ಕಾಲಘಟ್ಟದ ಇಮಾಮರನ್ನು ನಂಬಿರಿ. (ಅಲ್ಲಾಹನೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯ ಸಂಧನಾದ ಗುಲಾಮನನ್ನಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು.) ನನ್ನನ್ನು ನಂಬಿದರೆ ನಿಮಗೆ ಎಂತಹ ಅನುಗ್ರಹ ದೊರಕುವುದೆಂದು ನೀವು ನೋಡುವಿರಿ." ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾರು ಹೇಳಿದರು. ಅಲ್ಲಾಹನು ಮುಸ್ಲಿಮರಿಗೆ ಬುದ್ಧಿ ನೀಡಲಿ. ಯಾರಲ್ಲಿ ಸರಿಯಾದ ಏಕದೇವ ವಿಶ್ವಾಸವಿದೆಯೋ ಅವರಿಗೆಯೇ ಅಲ್ಲಾಹನು ದೊರಕುತ್ತಾನೆ.

ನಾವು ಸಹ ಬೈಅತ್ ಮಾಡಿದ್ದೇವೆ ಎಂಬುದರಿಂದ ಮಾತ್ರ ತೃಪ್ತರಾಗಬಾರದು. ಬೈಅತ್‌ನ ಉನ್ನತ ಮಟ್ಟವನ್ನು ನಾವು ಗಳಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಉದಾಹರಣೆ ನೀಡಿ ಮತ್ತು ಇನ್ನಿತರ ಸಹಾಬಿಗಳ ಬಗ್ಗೆ ವಿವರಿಸುತ್ತಾ ಹೀಗೆ ಹೇಳಿದರು: "ಈ ಜನರು ಬುದ್ಧಿಶಾಲಿಗಳೂ ಲೌಕಿಕ ಮತ್ತು ರಾಜಕೀಯ ಜ್ಞಾನ ಸಂಪನ್ನರೂ ಆಗಿದ್ದರು. ಸಂದರ್ಭ ದೊರೆತಾಗ ಅವರ ಉನ್ನತ ಗುಣಗಳು ಬಹಿರಂಗಗೊಂಡವು. ಅವರು ಬಹಳ ಭವ್ಯವಾಗಿ ರಾಜ್ಯಭಾರ ನಡೆಸಿದರು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅವರು ಏನೂ ಗೊತ್ತಿಲ್ಲದವರ ಹಾಗೆ ಕಾಣಿಸುತ್ತಿದ್ದರು. ಪರಿಪೂರ್ಣ ಅನುಸರಣೆ ಮತ್ತು ಆಜ್ಞೆಗಳ ಪಾಲನೆ ಅವರ ಕೆಲಸವಾಗಿತ್ತು. ಅವರು ತಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನೂ ಬುದ್ಧಿ ವೈಭವವನ್ನೂ ಕಡಿಮೆ ಎಂದು ಭಾವಿಸುತ್ತಿದ್ದರು. ಅಂತಹ ಜನರು ಲೋಕಕ್ಕೆ ಮಾರ್ಗದರ್ಶನ ನೀಡಿದುದನ್ನು ನಂತರ ಲೋಕವು ಕಂಡಿತು. **ಖಿಲಾಫತ್ ರಾಶಿದ**ದ ಕಾಲದಲ್ಲಿ ಸಹ ಈ ತರಬೇತಿ ಅನುಸರಣೆಯ ಉನ್ನತ ಮಟ್ಟವನ್ನು ಪ್ರಕಟಿಸಿತು."

ಇಸ್ಲಾಮಿನ ಚರಿತ್ರೆಯಲ್ಲಿ ಒಂದು ಘಟನೆಯನ್ನು ಹೀಗೆ ವಿವರಿಸಲಾಗಿದೆ: ಒಂದು ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಬೂ ಉಬೈದರಿಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಪತ್ರ ಲಭಿಸಿತು. ಅದರಲ್ಲಿ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಮೃತರಾದರೆಂದೂ ಸೇನಾಧಿಪತಿ ಸ್ಥಾನಕ್ಕೆ ಖಾಲಿದ್ ಬಿನ್ ವಲೀದರಿಗೆ ಬದಲಾಗಿ ಅಬೂ ಉಬೈದರನ್ನು ನೇಮಿಸಲಾಗಿದೆ ಎಂದೂ ಬರೆದಿತ್ತು. ಆ ಸಂದರ್ಭದಲ್ಲಿ ಸೇನಾಧಿಪತಿ ಹಝ್ರತ್ ಖಾಲಿದ್ ಬಿನ್ ವಲೀದ್ ಖಿಲಾಫತ್ತಿನ ಅನುಸರಣೆಯ ಅತ್ಯುತ್ತಮ ಮಾದರಿಯನ್ನು ಪ್ರಕಟಿಸಿದರು. ಅವರು ಹೇಳಿದರು: "ಜನರೇ, ಈಗ ನಿಮಗೆ ಈ ಸಮುದಾಯದ 'ಅಮೀನ'ರನ್ನು 'ಅಮೀರ'ರನ್ನಾಗಿ ನೇಮಿಸಲಾಗಿದೆ." ಹಝ್ರತ್ ಅಬೂ ಉಬೈದರರಿಗೆ "ಅಮೀನ್" ಎಂಬ ಪ್ರಶಸ್ತಿಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ್ದರು. ಆಗ ಹಝ್ರತ್ ಅಬೂ ಉಬೈದ ಹೇಳಿದರು: "ಖಾಲಿದ್ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವೆಂದೂ ಅವರ ಗೋತ್ರದ ಅತ್ಯುತ್ತಮ ಯುವಕನೆಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವುದನ್ನು ನಾನು ಕೇಳಿದ್ದೇನೆ." ಹಾಗೆ, ಅವರು ಖಲೀಫರ ತೀರ್ಮಾನಗಳನ್ನು ಈ ರೀತಿ ಸಂತೋಷದಿಂದ ಅಂಗೀಕರಿಸುತ್ತಿದ್ದರು.

ಈಗ ಜಮಾಅತಿನಲ್ಲಿಯೂ ಕೆಲವು ಸಾರಿ ಎಂತಹ ಸಂಭವಗಳು ನಡೆಯುತ್ತವೆ ಎಂದರೆ ಯಾರನ್ನಾದರೂ ಒಂದು ಹುದ್ದೆಯಿಂದ ತೆಗೆದು ಹಾಕಿದರೆ ಹಾಗೆ ಮಾಡಲು ಕಾರಣವೇನು ಎಂದು ಕೇಳುತ್ತಾರೆ. ಯಾಕಾಗಿ ತೆಗೆದು ಹಾಕಲಾಯಿತು, ನಮ್ಮಲ್ಲಿ ಏನು ಕೊರತೆಯಿತ್ತು ಎಂದು ಸಹ ಕೇಳುತ್ತಾರೆ. ಚರಿತ್ರೆಯಿಂದ ನಮಗೆ ದೊರಕುವ ಉದಾಹರಣೆಗಳನ್ನು ಮಾದರಿಯಾಗಿಟ್ಟುಕೊಂಡರೆ ಇಂತಹ ಪ್ರಶ್ನೆ ಉಂಟಾಗಲಾರದು. ಬೈಅತ್ ಮಾಡಿದ ಅಹ್ಮದಿ, أَطِيعُوا اللهَ وَأَطِيعُوا الرَّسُولَ وَأُوْلِي الأَمْرِ مِنْكُمْ **ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್ ಅಮ್‌ರಿ ಮಿನ್‌ಕುಮ್** ಎಂಬ ಆಜ್ಞೆ ಪಾಲನೆ ಮಾಡುವುದರಲ್ಲಿ ಅತ್ಯುತ್ತಮ ಉದಾಹರಣೆ ತೋರಿಸಬೇಕು. ಅದರ ಮೂಲಕ ಲೋಕದ ಗಮನವನ್ನು ನಮ್ಮ ಬಳಿಗೆ ಸೆಳೆಯಬೇಕು. ಹೀಗೆ ಮಾಡಿದರೆ ನಾವು ಲೋಕವನ್ನು ಜಯಿಸಲು ಸಾಧ್ಯವಾಗುತ್ತದೆ.

ಲೋಕವನ್ನು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಪಾದಕ್ಕೆ ತರಬಲ್ಲೆವು. ನಾವು ಲೋಕಕ್ಕೆ ಮಾರ್ಗದರ್ಶನ ನೀಡಿ ಲೋಕದಿಂದ ಕಲಹ ಗೊಂದಲಗಳನ್ನು ಕೊನೆಗೊಳಿಸಬಲ್ಲೆವು. ನಮ್ಮ ಬಳಿ ಪವಿತ್ರ ಖುರ್ಆನಿನ ಆಜ್ಞೆಗಳಿವೆ. ಅವುಗಳನ್ನು ನಾವು ಅನುಸರಿಸಬೇಕಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳ ದಾಖಲೆಗಳಿವೆ. ಅವುಗಳನ್ನು ಸಹ ಅನುಸರಿಸುವುದು ನಮಗೆ ಕಡ್ಡಾಯವಾಗಿದೆ. ನಮ್ಮ ಬಳಿ ಖಿಲಾಫತ್ತೆಂಬ ಆಧ್ಯಾತ್ಮಿಕ ವ್ಯವಸ್ಥೆ ಇದೆ. ಅದು ನಮ್ಮನ್ನು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳಿಗೆ ಲಕ್ಷ್ಯ ನೀಡಲು ಆಗ್ರಹಪಡಿಸುತ್ತದೆ. ಹೀಗಿರುವಾಗ ನಮ್ಮ ಮತ್ತು ಅನ್ಯರ ಮಧ್ಯೆ ಒಂದು ಸ್ಪಷ್ಟ ವ್ಯತ್ಯಾಸ ಪ್ರಕಟವಾಗದೆ ಇರಲು ಕಾರಣವಿಲ್ಲ. ಅಲ್ಲಾಹನು ನಮಗೆಲ್ಲರಿಗೂ ಅಂತಹ ಭಾಗ್ಯ ನೀಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮಿಂದ ಪ್ರತೀಕ್ಷಿಸಿದ್ದುದನ್ನು ನಾವು ಯಾವಾಗಲೂ ಈಡೇರಿಸುವವರಾಗೋಣ – ಆಮೀನ್.

--------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 05-12-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email**: khutuba.kannada@gmail.com*